ಸತ್ರ ಮೊಕದ್ದಮೆ ಸಂಖ್ಯೆ. 20/2022

ಫ್ರಾಸಾ-1

ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ ಪರ**

ನಾನು 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೇಸರಬಾವಿ ಊರಿನಿಂದ ಇಲಕಲ್ಲಗೆ ದಿನನಿತ್ಯ ಕೆಲಸಕ್ಕೆ ಹೋಗಿ ಬಂದು ಮಾಡುತ್ತೇನೆ. ನನ್ನ ಅಣ್ಣ ಶಾಂತಪ್ಪ ಮತ್ತು 2 ನೇ ಆರೋಪಿ ಹಲವು ವರ್ಷ ಗೋವಾದಲ್ಲಿ ವಾಸವಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ಅವರು ಅನ್ಯೋನ್ಯವಾಗಿ ಇದ್ದರು ಎಂದರೆ ಸರಿ.

2. ನನ್ನ ಅಣ್ಣ ಮುದಕಪ್ಪ ಮತ್ತು ಪಡಿಯಪ್ಪ ಮೃತಪಟ್ಟಿದ್ದರಿಂದ ನನ್ನ ಅಣ್ಣ ಶಾಂತಪ್ಪ ತನ್ನ ಹೆಂಡತಿ ಮತ್ತು ಮಗಳೊಂದಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು 2 ನೇ ಆರೋಪಿ ಮಧ್ಯ ಅನೈತಿಕ ಸಂಬಂಧ ಇದ್ದ ಬಗ್ಗೆ ಸುದ್ದಿ ಹರಡಿಕೊಂಡಿದ್ದರಿಂದ ನನಗೆ ತಿಳಿದು ಬಂದಿತು. ನನಗೆ ಖುದ್ದಾಗಿ ಈ ವಿಚಾರವನ್ನು ಯಾರು ತಿಳಿಸಿರುವುದಿಲ್ಲ. ನನ್ನ ಅಣ್ಣ ಊರಿಗೆ ಬಂದ ನಂತರ ವ್ಯವಸಾಯ ಮತ್ತು ಇತರ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿ ಮತ್ತು 2 ನೇ ಆರೋಪಿ ರವರಿಗೆ ಅನೈತಿಕ ಸಂಬಂಧ ಮುಂದುವರೆಸಬಾರದು ಎಂದು ನಾನು ಮತ್ತು ನಮ್ಮ ಸಂಬಂಧಿಕರು ಬುದ್ದಿವಾದ ಹೇಳಿರುತ್ತೇನೆ. ಚಾಸಾ-10 ಮತ್ತು 11 ರವರು ಚಾಸಾ-17 ರವರ ಜೊತೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಮನೆಯ ಪಕ್ಕದಲ್ಲಿ ಹಲು ಮನೆಗಳು ಬರುತ್ತವೆ ಎಂದರೆ ಸುಮಾರು 50 ರಿಂದ 60 ಅಡಿ ದೂರದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಚಾಸಾ-23 ಮತ್ತು ಚಾಸಾ-24 ರವರ ಮನೆಗಳು 1 ನೇ ಆರೋಪಿ ಮತ್ತು 2 ನೇ ಆರೋಪಿತಳ ಮನೆಯಿಂದ ಸುಮಾರು 60 ರಿಂದ 70 ಅಡಿ ಅಂತರದಲ್ಲಿ ಇರುತ್ತವೆ. 1 ನೇ ಆರೋಪಿಯ ಮನೆಯ ಮಾಳಗಿಯ ಮೇಲೆ ಯಾರಾದರೂ ಇದ್ದರೆ ಚಾಸಾ-23 ಮತ್ತು 24 ರವರ ಮನೆಯಿಂದ ರಾತ್ರಿ ವೇಳೆಯಲ್ಲಿ ಕಾಣಿಸುವುದಿಲ್ಲ ಎಂದರೆ ಸರಿ.

ಸತ್ರ ಮೊಕದ್ದಮೆ ಸಂಖ್ಯೆ. 20/2022

ಫ್ರಾಸಾ-1

3. ನನ್ನ ಅಣ್ಣ ಶಾಂತಪ್ಪ ಕಾಣೆಯಾದ 3 ದಿನಗಳ ನಂತರ ಅವರ ಮನೆಗೆ ಭೇಟಿ ನೀಡಿರುತ್ತೇನೆ. ಶಾಂತಪ್ಪ ಕಾಣೆಯಾದ ವಿಚಾರವಾಗಿ ನಾವು ದೂರನ್ನು ದಾಖಲಿಸಿದ್ದೆವು ಎಂದರೆ ಸರಿ. ಊರಿನಲ್ಲಿ ಶಾಂತಪ್ಪ ಅಂಕಲಿ ಮಠ ಕ್ಕೆ ಹೋಗಿರುತ್ತಾನೆ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ 1 ನೇ ಆರೋಪಿಗೆ ನಾನು ಬುದ್ಧಿ ಹೇಳಿದ ವಿಚಾರವನ್ನು ತಿಳಿಸಿರುತ್ತೇನೆ. ಪೊಲೀಸರು ನನಗೆ ನನ್ನ ಅಣ್ಣನನ್ನು ಆರೋಪಿತರು ಕೊಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ನಾನು ಆರೋಪಿತರ ವಿರುದ್ಧ ಸಂಶಯಪಟ್ಟು ದೂರು ದಾಖಲಿಸಲು ಹೋಗಿದ್ದಾಗ ಠಾಣೆಯಲ್ಲಿ ಆರೋಪಿತರು ಇರಲಿಲ್ಲ. ಪೊಲೀಸರಿಗೆ ನನ್ನ ಅಣ್ಣ ಶಾಂತಪ್ಪನ ಮೊಬೈಲ ನಂಬರ ಕೊಟ್ಟಿರುವುದಿಲ್ಲ.

4. 1 ನೇ ಆರೋಪಿಯ ನಿಶ್ಚಿತಾರ್ಥವಾಗಿ ಮದುವೆ ಮಾಡಬೇಕೆಂದು ಅವರ ಮನೆಯವರು ಇದ್ದರು ಎಂದರೆ ಸರಿ. ಈ ಕಾರಣಕ್ಕಾಗಿ 1 ನೇ ಆರೋಪಿ ಊರಿಗೆ ಬಂದಿದ್ದನು ಎಂದರೆ ಸರಿಯಲ್ಲ. ಶಾಂತಪ್ಪ ಕಾಣೆಯಾದಾಗ ನಾನು ಚಾಸಾ-11 ರವರನ್ನು ವಿಚಾರ ಮಾಡಿದಾಗ ಆಕೆ ನನಗೆ ಯಾವುದೇ ವಿಚಾರವನ್ನು ತಿಳಿಸಲಿಲ್ಲ. ನನಗೂ ಮತ್ತು 2 ನೇ ಆರೋಪಿಗೆ ಆಸ್ತಿ ವಿಚಾರವಾಗಿ ಗಲಾಟೆ ಇದ್ದು ಆಕೆ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಕೊಲೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ದುರ್ಗವ್ವ ದೊಡಮನಿ | ಫ್ರಾ.ಸಾ-10 |
| ಗಂಡನ ಹೆಸರು | : | ಬಾಲಸ್ವಾಮಿ | ಚಾಸಾ-23 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ಕೇಸರಬಾವಿ | |

ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಶಾಂತಪ್ಪ ನನ್ನ ಅಣ್ಣ. 2 ನೇ ಆರೋಪಿ/ಹುಲಗವ್ವ ನನ್ನ ಅಣ್ಣನ ಹೆಂಡತಿ. ಅವರಿಬ್ಬರು ಮೊದಲು ಗೋವಾ ರಾಜ್ಯದಲ್ಲಿ ತಮ್ಮ ಮಕ್ಕಳೊಂದಿಗೆ ವಾಸವಾಗಿದ್ದರು. 1 ನೆ ಆರೋಪಿ ಬಸವರಾಜ ನನ್ನ ಅಕ್ಕನ ಮಗ. ಆತನು ಸಹ ಗೋವಾ ರಾಜ್ಯದಲ್ಲಿ ವಾಸವಾಗಿದ್ದನು. 1 ನೇ ಆರೋಪಿ ಬಸವರಾಜ ಗೋವಾದಲ್ಲಿದ್ದಾಗ ನನ್ನ ಅಣ್ಣನ ಹೆಂಡತಿ 2 ನೇ ಆರೋಪಿ/ಹುಲಗವ್ವಳ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ. ನನ್ನ ಅಣ್ಣ ಶಾಂತಪ್ಪ ರವರಿಗೆ ವಿಷಯ ತಿಳಿದು 2 ನೇ ಆರೋಪಿಗೆ ಬುದ್ದಿವಾದ ಹೇಳಿದರೂ ಆಕೆ 1 ನೇ ಆರೋಪಿ ಜೊತೆ ಅನೈತಿಕ ಸಂಬಂಧವನ್ನು ಮುಂದುವರೆಸುವದು ಬಿಡಲಿಲ್ಲ. ಈ ಕಾರಣದಿಂದ ನನ್ನ ಅಣ್ಣ ಶಾಂತಪ್ಪ ತನ್ನ ಹೆಂಡತಿ ಮತ್ತು ಮಗಳೊಂದಿಗೆ ಕೇಸರಬಾವಿ ಗ್ರಾಮದಲ್ಲಿ ತನ್ನ ಜಾಗೆಯಲ್ಲಿ ಶೆಡ್ ಹಾಕಿಕೊಂಡು ವಾಸವಾಗಿದ್ದನು. 1 ನೇ ಆರೋಪಿ ಸಹ ಗೋವಾ ರಾಜ್ಯದಿಂದ ಆ ಸಮಯದಲ್ಲಿ ನಮ್ಮ ಗ್ರಾಮಕ್ಕೆ ವಾಪಸ್ಸು ಬಂದಿರುತ್ತಾನೆ. ನಂತರ 2 ನೇ ಆರೋಪಿ ಜೊತೆ 1 ನೇ ಆರೋಪಿ ತನ್ನ ಅನೈತಿಕ ಸಂಬಂಧವನ್ನು ಮುಂದುವರೆಸಿರುತ್ತಾನೆ.

2. ಸುಮಾರು ಎರಡು ವರ್ಷಗಳ ಹಿಂದೆ ಸುಮಾರು ರಾತ್ರಿ 10 ಗಂಟೆಗೆ 1 ನೇ ಆರೋಪಿ ತನ್ನ ಮನೆಯ ಮಾಳಗಿಯ ಮೇಲೆ ಮಲಗಿಕೊಳ್ಳಲು ಹೋದನು. ಆತನ

ಹಿಂದುಗಡೆಯಿಂದ 3 ನೇ ಆರೋಪಿ/ನಿಂಗಪ್ಪ ಹಾಗೂ ನ್ಯಾಯಾಲಯದ ಮುಂದಿರುವ ಇಬ್ಬರೂ ಆರೋಪಿತರು ಸಹ 1 ನೇ ಆರೋಪಿಯ ಮನೆಯ ಮಾಳಗಿ ಮೇಲೆ ಹೋಗಿರುತ್ತಾರೆ. ಮರುದಿನದಿಂದ ನನ್ನ ಅಣ್ಣ ಊರಿನಲ್ಲಿ ಕಾಣಲಿಲ್ಲ ಮತ್ತು ಆತನಿಗೆ ಕರೆ ಮಾಡಿದರೆ ಆತನ ಮೊಬೈಲ ಪೋನ ಸ್ವಿಚ್ ಆಫ್ ಆಗಿತ್ತು.

3. ಇದಾದ 20 ದಿನಗಳ ನಂತರ ಶಾಂತಪ್ಪ ರವರ ಮಗ ಚಾಸಾ-10 ರವರನ್ನು ಊರಿಗೆ ಬರಮಾಡಿಕೊಂಡು ನಂತರ ಶಾಂತಪ್ಪ ಕಾಣೆಯಾದ ವಿಚಾರವಾಗಿ ದೂರು ದಾಖಲಿಸಲಾಯಿತು. ಇದಾದ ಸ್ವಲ್ಪ ದಿನಗಳ ನಂತರ ಆರೋಪಿತರೆಲ್ಲರೂ ಸೇರಿ ಶಾಂತಪ್ಪರವರನ್ನು ಕೊಲೆ ಮಾಡಿದ ವಿಚಾರ ತಿಳಿದು ಬಂದಿತು. 1 ರಿಂದ 3 ನೇ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವೀಡಿಯೋ ಕಾನ್ಪರೆನ್ಸ ಮೂಲಕ ಹಾಜರಿರುವ 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ ಪರ**

ಶಾಂತಪ್ಪ ಮತ್ತು 2 ನೇ ಆರೋಪಿ ಗೋವಾ ರಾಜ್ಯದಲ್ಲಿ ವಾಸವಾಗಿದ್ದಾಗ ಅನ್ಯೋನ್ಯವಾಗಿದ್ದರು ಎಂದರೆ ಸಾಕ್ಷಿ 1 ನೇ ಆರೋಪಿ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡ ಸಮಯದಿಂದ ಅನ್ಯೋನವಾಗಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಗ್ರಾಮದಿಂದ ಹಲವು ಜನ ಗೋವಾ ರಾಜ್ಯಕ್ಕೆದುಡಿಯಲು ಹೋಗುತ್ತಾರೆ ಎಂದರೆ ಸರಿ.

2. 2 ನೇ ಆರೋಪಿತಳು 1 ನೇ ಆರೋಪಿ ಜೊತೆ ಸಲುಗೆಯಿಂದ ಪೋನಿನಲ್ಲಿ ಮಾತನಾಡುತ್ತಿದ್ದರಿಂದ ಅವರ ಮಧ್ಯ ಅನೈತಿಕ ಸಂಬಂಧ ಇರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ. ನಾನು ಕೇಸರಬಾವಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಗೋವಾ ರಾಜ್ಯದಲ್ಲಿ ನನ್ನ ಅಣ್ಣ ಮತ್ತು 2 ನೇ ಆರೋಪಿ ವಾಸವಾಗಿದ್ದಾಗ ಯಾವಾಗಲಾದರೊಮ್ಮೆ ನಮಗೆ ಪೋನ ಮಾಡಿ ಮಾತನಾಡುತ್ತಿದ್ದರು.

3. ನಮ್ಮ ಮನೆಯಲ್ಲಿ ನಾನು ಹೆಚ್ಚಾಗಿ ಪೋನ ಉಪಯೋಗಿಸುವುದಿಲ್ಲ ಆದರೆ ನನ್ನ ಮಕ್ಕಳು ಉಪಯೋಗಿಸುತ್ತಾರೆ. ಊರಿನಲ್ಲಿ ನನ್ನ ಅಣ್ಣ ವಾಸವಾಗಿದ್ದಾಗ ವ್ಯವಸಾಯ ಮತ್ತು ಬೇರೆ ಕೆಲಸಗಳನ್ನು ಮಾಡಿಕೊಂಡು ಇದ್ದರು ಎಂದರೆ ಸರಿ. 1 ನೇ ಆರೋಪಿ ಗೋವಾದಲ್ಲಿ ವಾಸವಾಗಿದ್ದಾಗ ಆತನಿಗೆ ನಿಶ್ಚಿತಾರ್ಥ ಆಗಿತ್ತು ಎಂದರೆ ಸರಿ. ಮದುವೆ ಮಾಡಿಕೊಳ್ಳಲು 1 ನೇ ಆರೋಪಿ ಊರಿಗೆ ಬಂದಿದ್ದನು ಎಂದರೆ ಸಾಕ್ಷಿಯು 2 ನೇ ಆರೋಪಿ ಊರಿಗೆ ಬಂದಿದ್ದರಿಂದ ಆತನು ಬಂದಿದ್ದ ಎಂದು ನುಡಿಯುತ್ತಾರೆ.

4. 2 ನೇ ಆರೋಪಿತಳಿಗೆ ನಾನು ಹಲವು ಬಾರಿ ಬುದ್ಧಿವಾ ಹೇಳಿರುತ್ತೇನೆ ಆದರೆ ಆಕೆ ನನ್ನ ಮಾತನ್ನು ಕೇಳುತ್ತಿರಲಿಲ್ಲ. ನನ್ನ ಹೇಳಿಕೆಯಲ್ಲಿ 2 ನೇ ಆರೋಪಿಗೆ ಹಲವು ಬಾರಿ ಬುದ್ಧಿವಾದ ಹೇಳಿದ ವಿಚಾರ ತಿಳಿಸಿರುತ್ತೇನೆ. ನನಗೆ ನನ್ನ ಅಣ್ಣ ಶಾಂತಪ್ಪನ ಮೊಬೈಲ ಪೋನ ನಂಬರ ಗೊತ್ತಿಲ್ಲ. 4 ಮತ್ತು 5 ನೇ ಆರೋಪಿತರ ಹೆಸರು ಮತ್ತು ಅವರ ತಂದೆಯ ಹೆಸರು ನನಗೆ ಹೇಳಲು ಆಗುವುದಿಲ್ಲ. ಶಾಂತಪ್ಪ ಊರಿನಲ್ಲಿ ಕಾಣದೆ ಇದ್ದಾಗ 2 ನೇ ಆರೋಪಿ ದೂರನ್ನು ಕೊಡುವದು ಬೇಡ, ಕೊಟ್ಟರೆ ನಾನು ಸಾಯುತ್ತೇನೆ ಎಂದು ಹೇಳುತ್ತಿದ್ದಳು. ಚಾಸಾ-10/ಆಕಾಶ ಊರಿಗೆ ಯಾವ ದಿನಾಂಕ ಬಂದರು ಎಂದು ನನಗೆ ಹೇಳಲು ಆಗುವುದಿಲ್ಲ. 1 ನೇ ಆರೋಪಿ ಮತ್ತು 3 ರಿಂದ 5 ನೇ ಆರೋಪಿತರು ಮಾಳಗಿಯ ಮೇಲೆ ಯಾವ ಕಾರಣಕ್ಕಾಗಿ ಹೋಗಿರುತ್ತಾರೆ ಎಂದು ನಾನು ವಿಚಾರ ಮಾಡಿರುವುದಿಲ್ಲ.

5. ನಮ್ಮ ಮನೆಯಿಂದ 1 ನೇ ಆರೋಪಿ/ಬಸವರಾಜ ರವರ ಮನೆ ಸುಮಾರು 20 ಅಡಿ ಅಂತರದಲ್ಲಿ ಇರುತ್ತದೆ. 1 ನೇ ಆರೋಪಿ ಮನೆ ಮೇಲೆ ಹೋಗಬೇಕಾದರೆ 2 ನೇ ಆರೋಪಿ ಶೆಡ್ ನ ಬದಿಯಿಂದ ಹೋಗಬೇಕು ಎಂದರೆ ಸರಿ. 1 ನೇ ಆರೋಪಿ ಮನೆಯ ನಂತರ ಬೇರೆ ಯಾವುದೇ ಮನೆಗಳು ಇರುವುದಿಲ್ಲ ಎಂದರೆ ಸರಿ. ರಾತ್ರಿ ವೇಳೆಯಲ್ಲಿ 1 ನೇ ಆರೋಪಿ ಮನೆಯ ಮಾಳಗಿಯ ಮೇಲೆ ಯಾರು ಓಡಾಡುತ್ತಾರೆ ಎಂದು

ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು 3 ರಿಂದ 5 ನೇ ಆರೋಪಿತರು 1 ನೇ ಆರೋಪಿತನ ಮನೆಯ ಮಾಳಗಿ ಮೇಲೆ ಹೋಗುವದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ರಾಮಕುಮಾರ ರಾಳದಡ್ಡಿ | ಫ್ರಾ.ಸಾ-9 |
| ತಂದೆಯ ಹೆಸರು | : | ವೆಂಕಟೇಶ | ಚಾಸಾ-22 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಡೆಲಿವರಿ ಬಾಯ್ | |
| ವಿಳಾಸ | : | ಬೆಂಗಳೂರು | |

ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

2021 ರಲ್ಲಿ ನಾನು ತೊಂಡಿಹಾಳ ರಸ್ತೆಯಲ್ಲಿರುವ ರಿಲಾಯನ್ಸ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುತ್ತಿದ್ದೆ.

2. ಸುಮಾರು ಒಂದುವರೆ ಎರಡು ವರ್ಷಗಳ ಹಿಂದೆ ನಾನು ಪೆಟ್ರೋಲ್ ಬಂಕ್ ನಲ್ಲಿ ಮಲಗಿಕೊಂಡಿದ್ದಾಗ ಒಂದು ಮಾರುತಿ ಸುಜುಕಿ ಗಾಡಿ ಬಂದಿದ್ದು ಹಾರ್ನ ಮಾಡಿ ನನ್ನನ್ನು ಎಬ್ಬಿಸಿ ಸುಮಾರು ರೂ.1000/- ಕ್ಕೆ ಪೆಟ್ರೋಲ್ ಹಾಕಿಕೊಂಡು ಹೋಗಿರುತ್ತಾರೆ. ಸುಮಾರು 20 ದಿನಗಳ ನಂತರ ಪೊಲೀಸರು ನಮ್ಮ ಪೆಟ್ರೋಲ್ ಬಂಕ್ ಗೆ ಬಂದಿದ್ದು ನನ್ನನ್ನು ವಿಚಾರಿಸಿದಾಗ ನಾನು ಸದರಿ ವಿಚಾರವನ್ನು ತಿಳಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ ಪರ**

ನಮ್ಮ ತೊಂಡಿಹಾಳ ರಸ್ತೆಯಲ್ಲಿರುವ ರಿಲಾಯನ್ಸ ಪೆಟ್ರೋಲ್ ಬಂಕ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತದೆ ಎಂದರೆ ಸರಿ. ರಾತ್ರಿ ವೇಳೆಯಲ್ಲಿ ಹಲವು ವಾಹನಗಳು ಪೆಟ್ರೋಲ್ ಹಾಕಿಸಿಕೊಳ್ಳಲು ಬರುತ್ತವೆ ಎಂದರೆ ಸರಿ. ನಿಖರವಾಗಿ ಇದೇ ವಾಹನ ಬಂದಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ಉಮೇಶ ಮಾದರ | ಫ್ರಾ.ಸಾ-8 |
| ತಂದೆಯ ಹೆಸರು | : | ಪರಸಪ್ಪ | ಚಾಸಾ-21 |
| ವಯಸ್ಸು | : | 26 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ತುಂಬ | |

ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-19 ನನ್ನ ಅಣ್ಣ. ಆತನು ಇಚಲಕರಂಜಿಯಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. 1 ನೇ ಆರೋಪಿ ನನಗೆ ಸಂಬಂಧದಲ್ಲಿ ಅಳಿಯನಾಗಬೇಕು. ಮೃತ ಶಾಂತಪ್ಪ ಸಂಬಂಧದಲ್ಲಿ ನನಗೆ ಅಣ್ಣನಾಗಬೇಕು. ಚಾಸಾ-20 ನನ್ನ ಮಾವ. ನನ್ನ ಅಣ್ಣ ಚಾಸಾ-19 ರವರು ಚಾಸಾ-20/ಆನಂದ ರವರ ಹೆಸರಿನಲ್ಲಿ ಮಾರುತಿ ಸುಜುಕಿ ನಂ.ಜಿಎ-06/ಡಿ-5554 ವಾಹನವನ್ನು ಖರೀದಿ ಮಾಡಿದ್ದರು. ನ್ಯಾಯಾಲಯದ ಮುಂದೆ ವೀಡಿಯೋ ಕಾನ್ಪರೆನ್ಸ ಮೂಲಕ ಹಾಜರುಪಡಿಸಿರುವ 2 ನೇ ಆರೋಪಿ ಮೃತ ಶಾಂತಪ್ಪನ ಹೆಂಡತಿ. ಅವರು ಮೊದಲು ಗೋವಾದಲ್ಲಿ ಕುಟುಂಬ ಸಮೇತ ವಾಸವಾಗಿದ್ದರು. ನಂತರ ಶಾಂತಪ್ಪ ತನ್ನ ಹೆಂಡತಿ ಮತ್ತು ಮಗಳ ಜೊತೆಯಲ್ಲಿ ಆತನ ಸ್ವಂತ ಊರಾದ ಕೇಸರಬಾವಿಗೆ ಬಂದಿರುತ್ತಾರೆ. 1 ನೇ ಆರೋಪಿ ಬಸವರಾಜ ಸಹ ಮೊದಲು ಗೋವಾದಲ್ಲಿ ವಾಸವಾಗಿದ್ದನು. ನಂತರ ಆತನೂ ಸಹ ಕೇಸರಬಾವಿಗೆ ಬಂದಿರುತ್ತಾನೆ.

2. ಸುಮಾರು ಎರಡು ವರ್ಷಗಳ ಹಿಂದೆ ರಾತ್ರಿ 8-30 ಗಂಟೆಗೆ 1 ಮತ್ತು 3 ನೇ ಆರೋಪಿತರು ನಮ್ಮ ಮನೆಗೆ ಬಂದು, ನನ್ನ ಅಣ್ಣ ಚಾಸಾ-19 ರವರ ಕಾರಿನ ಬೀಗವನ್ನು ಕೇಳಿದರು. ಆಗ ನನ್ನ ಅಣ್ಣ ಚಾಸಾ-19 ರವರು ನನಗೆ ಕರೆ ಮಾಡಿ 1 ಮತ್ತು 3 ನೇ

ಆರೋಪಿತರು ಆಸ್ಪತ್ರೆಗೆ ಹೋಗುತ್ತಿದ್ದಾರೆ ಅವರಿಗೆ ಕಾರಿನ ಬೀಗವನ್ನು ಕೊಡುವಂತೆ ತಿಳಿಸಿದರು. ನಂತರ 1 ಮತ್ತು 3 ನೇ ಆರೋಪಿತರು ಕಾರಿನ ಮಾರುತಿ ಸುಜುಕಿ ಪಿಕೊ ಕಾರ ನಂ.ಜಿಎ-06/ಡಿ-5554 ನ್ನು ರಾತ್ರಿ 8-30 ಗಂಟೆಗೆ ತೆಗೆದುಕೊಂಡು ಹೋಗಿ ಮರುದಿನ ಬೆಳಗಿನ ಜಾವ 4-30 ಗಂಟೆಗೆ ತಂದು ಬಿಟ್ಟಿರುತ್ತಾರೆ.

3. ಇದಾದ ಸುಮಾರು 20 ದಿನಗಳ ನಂತರ ಆರೋಪಿತರ ಜೊತೆಯಲ್ಲಿ ಪೊಲೀಸರು ನಮ್ಮ ಮನೆಗೆ ಬಂದು ವಾಹನವನ್ನು ಪರಿಶೀಲಿಸಿ ಸೌಂಡಬಾಕ್ಸ ಗೆ ರಕ್ತ ಹತ್ತಿದ್ದು ಸದರಿ ವಾಹನವನ್ನು ವಶಕ್ಕೆ ಪಡೆದುಕೊಂಡು ಪಂಚನಾಮೆ ಜರುಗಿಸಿ ತೆಗೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ಶಾಂತಪ್ಪನನ್ನು ಕೊಲೆ ಮಾಡಿ ಇದೇ ವಾಹನದಲ್ಲಿ ಸಾಗಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನಮ್ಮ ಮನೆಯ ಬಳಿ ಪೊಲೀಸರು ವಾಹನದಿಂದ ಜಪ್ತಿ ಪಡಿಸಿಕೊಂಡ ರಕ್ತ ಕಲೆಯಾದ ಸೌಂಡ ಬಾಕ್ಸ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ಎರಡು ಸೌಂಡ ಬಾಕ್ಸಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾಲು-4 ಎಂದು ಗುರುತಿಸಲಾಗಿದೆ. ಸದರಿ ಸಮಯದಲ್ಲಿ ತೆಗೆದ ಭಾವಚಿತ್ರವನ್ನುಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-17 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿ ವಾಹನ ಮತ್ತು ಸೌಂಡಬಾಕ್ಸಗಳು ಕಂಡುಬರುತ್ತವೆ. ನಮ್ಮ ಮನೆಗೆ ತೆಗೆದುಕೊಂಡು ಹೋಗಲು ಬಂದಿದ್ದ 1 ಮತ್ತು 3 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವೀಡಿಯೋ ಕಾನ್ಪರೆನ್ಸ ಮೂಲಕ ಹಾಜರಿರುವ 1 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಮ್ಮ ಮನೆಗೆ ಪೊಲೀಸರು ಬಂದಿದ್ದಾಗ ನ್ಯಾಯಾಲಯದ ಮುಂದಿರುವ 4 ಮತ್ತು 5 ನೇ ಆರೋಪಿತರನ್ನು ಸಹ ಕರೆದುಕೊಂಡು ಬಂದಿದ್ದರು. ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಮತ್ತು 5 ನೇ ಆರೋಪಿತರನ್ನು ನೋಡಿ ಗುರುತಿಸಿ ಅವರು ನಮ್ಮ ಗ್ರಾಮದ ವಾಸಿಗಳು.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ ಪರ**

4 ನೇ ಆರೋಪಿ ತಂದೆ ಮರುಳು ಸಾಗಾಣೆ ಮಾಡುವ ಕೆಲಸ ಮಾಡುತ್ತಾರೆ ಎಂದರೆ ಸರಿ. ನಮ್ಮ ತುಂಬ ಗ್ರಾಮದಲ್ಲಿ ಹೆಚ್ಚಾಗಿ ಮರುಳು ಸಾಗಣೆ ಮಾಡಲಾಗುತ್ತದೆ ಎಂದರೆ ಸರಿ. ಸದರಿ ಗ್ರಾಮದಲ್ಲಿ ಅಮರಯ್ಯ ಹಿರೇಮಠ ಎನ್ನುವವರು ರಾಜಕೀಯ ಮಾಡುತ್ತಾರೆ ಎಂದರೆ ಸರಿ. ಸದರಿ ಗ್ರಾಮದಲ್ಲಿ ಮರಳಿನ ವಿಚಾರವಾಗಿ ರಾಜಕೀಯ ಮುಖಂಡರ ಮಧ್ಯ ಗಲಾಟೆ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು 4 ನೇ ಆರೋಪಿ ತಂದೆ ಮೇಲೆ ಸಿಟ್ಟಾಗಿದ್ದರು ಎಂದರೆ ಸರಿ.

2. ನಾನು ಮತ್ತು ನನ್ನ ಅಣ್ಣ ಇಬ್ಬರೂ ಮಾರುತಿ ಸುಜುಕಿ ವಾಹನ ಚಾಲನೆ ಮಾಡುತ್ತಿದ್ದೆವು ಎಂದರೆ ಸರಿ. ಪೊಲೀಸರು ನನ್ನ ಮತ್ತು ನನ್ನ ಅಣ್ಣನ ಪೋನಿನ ನಂಬರನ ಬಗ್ಗೆ ವಿಚಾರ ಮಾಡಿರುವುದಿಲ್ಲ. ನಾನು 1 ಮತ್ತು 3 ನೇ ಆರೋಪಿತರನ್ನು ನಮ್ಮ ವಾಹನವನ್ನು ಎಲ್ಲಿ ತೆಗೆದುಕೊಂಡು ಹೋಗಿದ್ದರು ಎಂದು ವಿಚಾರ ಮಾಡಿರುವುದಿಲ್ಲ. ಆರೋಪಿತರು ಆಸ್ಪತ್ರೆಗೆ ಹೋಗಲು ವಾಹನವನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 3 ನೇ ಆರೋಪಿತರು ವಾಹನವನ್ನು ತಂದು ಬಿಟ್ಟ ನಂತರ ವಾಹನವನ್ನು ಹೆಚ್ಚಾಗಿ ಉಪಯೋಗಿಸಿರುವುದಿಲ್ಲ. ಸೌಂಡಬಾಕ್ಸಗಳ ಮೇಲೆ ರಕ್ತದ ಕಲೆಗಳು ಇದ್ದ 20 ದಿನಗಳ ನಂತರ ಪೊಲೀಸರು ನಮ್ಮ ಮನೆಗೆ ಬಂದಾಗ ತಿಳಿದುಬಂದಿರುತ್ತದೆ. 1 ಮತ್ತು 3 ನೇ ಆರೋಪಿತರು ನನ್ನ ಅಣ್ಣ ಚಾಸಾ-19 ರವರ ವಾಹನವನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. 3 ನೇ ಆರೋಪಿ/ನಿಂಗಪ್ಪನ ಸಹೋದರನ ಹೆಂಡತಿ ಊರಿನಲ್ಲಿ ಚುನಾವಣೆಗೆ ಸ್ಪರ್ಧಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಅಮರೇಶ ಅನ್ನುವವರು ನಿಂಗಪ್ಪನ

ಸಹೋದರನ ಹೆಂಡತಿ ಜೊತೆ ಸ್ಪರ್ಧಿಸಿ ಸೋತಿದ್ದರು ಎಂದರೆ ಸರಿ. ಈ ಕಾರಣದಿಂದ ಅಮರೇಶ ಅನ್ನುವವರಿಗೆ 3 ನೇ ಆರೋಪಿ ನಿಂಗಪ್ಪ ರವರ ಮೇಲೆ ದ್ವೇಷ ಇತ್ತು ಎಂದರೆ ಸರಿ. ಅಮರೇಶ ಎನ್ನುವವರು ಎಕ್ಸ ಎಂ.ಎಲ್.ಎ ಕಾಶಪ್ಪನವರ ಹಿಂಬಾಲಕರು ಎಂದರೆ ಸರಿ. 3 ನೇ ಆರೋಪಿ/ನಿಂಗಪ್ಪ ಊರಿನಲ್ಲಿ ಪಂಚಾಯತಿ ಕಾಮಗಾರಿಕೆ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಕಾರಣದಿಂದ ರಾಜಕೀಯ ಪ್ರಭಾವದಿಂದ 3 ನೇ ಆರೋಪಿಯನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ ಆರೋಪಿತರು ಶಾಂತಪ್ಪ ರವರನ್ನು ಕೊಲೆ ಮಾಡಿರುವ ವಿಚಾರ ನನಗೆ ತಿಳಿದು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

4. ಹುನಗುಂದ ಪೊಲೀಸರು ನನ್ನನ್ನು ವಿಚಾರ ಮಾಡಿರುತ್ತಾರೆ, ಆದರೆ ಯಾವ ದಿನಾಂಕ ಎಂದು ಗೊತ್ತಿಲ್ಲ. ಪೊಲೀಸರು ನಮ್ಮ ಮನೆಗೆ ಬಂದಿದ್ದಾಗ ನಾನು ಗೋವಾದಲ್ಲಿ ಇದ್ದೆ. ಸದರಿ ಸಮಯದಲ್ಲಿ ಕಾರಿನ ಬೀಗ ನಮ್ಮ ಮನೆಯಲ್ಲಿ ಇತ್ತು. ಸದರಿ ಬೀಗವನ್ನು ನನ್ನ ಚಿಕ್ಕಮ್ಮ ಪೊಲೀಸರಿಗೆ ಕೊಟ್ಟಿರುತ್ತಾರೆ. ಪೊಲೀಸರು ನಮ್ಮ ಮನೆಗೆ ಬಂದಿದ್ದಾಗ ಕಾರಿನ ಸೌಂಡ ಬಾಕ್ಸಗಳ ಮೇಲೆ ರಕ್ತ ಕಲೆ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ. ನಾನು ನನ್ನ ಚಿಕ್ಕಮ್ಮ ರವರನ್ನು ವಾಹನದ ಜಪ್ತಾದ ವಿಚಾರವಾಗಿ ವಿಚಾರ ಮಾಡಿರುವುದಿಲ್ಲ. ನನ್ನ ಚಿಕ್ಕಮ್ಮ ಪೊಲೀಸರಿಗೆ ಕಾರಿನ ಬೀಗ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ಆನಂದ ಮಾದರ | ಫ್ರಾ.ಸಾ-7 |
| ತಂದೆಯ ಹೆಸರು | : | ಶಂಕ್ರಪ್ಪ | ಚಾಸಾ-20 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | |
| ವಿಳಾಸ | : | ಗೋವಾ | |

ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನನ್ನ ಸ್ವಂತ ಊರು ಕುನಬೆಂಚಿ. ಚಾಸಾ-17 ನನ್ನ ತಾಯಿ. 2 ನೇ ಆರೋಪಿ/ಹುಲಗವ್ವ ನನ್ನ ಅಕ್ಕ. 2 ನೇ ಆರೋಪಿಯ ಮದುವೆ ಸುಮಾರು 20 ವರ್ಷಗಳ ಹಿಂದೆ ಮೃತ ಶಾಂತಪ್ಪ ರವರ ಜೊತೆ ಆಗಿತ್ತು ಮತ್ತು ಅವರ ದಾಂಪತ್ಯದಿಂದ ಚಾಸಾ-10 ಮತ್ತು 11 ಇಬ್ಬರು ಮಕ್ಕಳಿರುತ್ತಾರೆ. ಮೃತ ಶಾಂತಪ್ಪ ರವರ ಸ್ವಂತ ಊರು ಕೇಸರಬಾವಿ. ನನ್ನ ಭಾವ ಶಾಂತಪ್ಪ ಮತ್ತು ನನ್ನ ಅಕ್ಕ ದುಡಿಯಲು ಗೋವಾಕ್ಕೆ ಹೋಗಿ ಅಲ್ಲಿಯೇ ಸ್ವಲ್ಪ ವರ್ಷಗಳ ಕಾಲ ವಾಸವಾಗಿದ್ದರು. 1 ನೇ ಆರೋಪಿ/ಬಸವರಾಜ ನನ್ನ ದೊಡ್ಡಮ್ಮನ ಮಗ. ಆತನು ಸಹ ಗೋವಾ ರಾಜ್ಯದಲ್ಲಿ ವಾಸವಾಗಿದ್ದನು.

2. 1 ನೇ ಆರೋಪಿ ಮತ್ತು ನನ್ನ ಅಕ್ಕ 2 ನೇ ಆರೋಪಿ ಗೋವಾದಲ್ಲಿ ವಾಸವಾಗಿದ್ದಾಗ ಅವರ ಮಧ್ಯ ಅನೈತಿಕ ಸಂಬಂಧ ಇತ್ತು ಎಂದು ನನಗೆ ತಿಳಿದು ಬಂತು. ಆ ಸಮಯದಲ್ಲಿ ನಾನು ಸಹ ಅವರಿಗೆ ಬುದ್ಧಿವಾದ ಹೇಳಿದ್ದೆ. ನಾವು ಬುದ್ಧಿವಾದ ಹೇಳಿದರೂ ಸಹ 1 ನೇ ಆರೋಪಿ ಅನೈತಿಕ ಸಂಬಂಧವನ್ನು 2 ನೇ ಆರೋಪಿ ಜೊತೆ ಮುಂದುವರೆಸಿರುತ್ತಾನೆ. ಈ ಕಾರಣದಿಂದ ಮೃತ ಶಾಂತಪ್ಪ ತನ್ನ ಹೆಂಡತಿ ಮತ್ತು ಮಗಳನ್ನು ಕರೆದುಕೊಂಡು ಕೇಸರಬಾವಿ ಊರಿಗೆ ಕರೆದುಕೊಂಡು ಬಂದು ಆತನ ಜಾಗದಲ್ಲಿ ಶೆಡ್ ಹಾಕಿಕೊಂಡು

ವಾಸವಾಗಿದ್ದನು. ಚಾಸಾ-10 ವಿದ್ಯಾಭ್ಯಾಸ ಮಾಡುತ್ತಿದ್ದರಿಂದ ಗೋವಾದಲ್ಲಿಯೇ ನಮ್ಮ ಜೊತೆಯಲ್ಲಿ ವಾಸವಾಗಿದ್ದನು. ನಂತರ 1 ನೇ ಆರೋಪಿ ಸಹ ಗೋವಾದಿಂದ ಕೇಸರಬಾವಿ ಗ್ರಾಮಕ್ಕೆ ಬಂದು ತನ್ನ ಅನೈತಿಕ ಸಂಬಂಧವನ್ನು 2 ನೇ ಆರೋಪಿ ಜೊತೆಗೆ ಮುಂದುವರೆಸಿರುತ್ತಾನೆ.

3. ಮಾರುತಿ ಸುಜುಕಿ ವಾಹನ ಸಂಖ್ಯೆ ಜಿಎ-06/ಡಿ-555 ವಾಹನ ನನ್ನ ಹೆಸರಿನಲ್ಲಿ ಇರುತ್ತದೆ. ಈ ವಾಹನ ಚಾಸಾ-19 ರವರು ನನ್ನ ಹೆಸರಿನಲ್ಲಿ ಖರೀದಿ ಮಾಡಿ, ಅವರೆ ಉಪಯೋಗಿಸುತ್ತಿದ್ದಾರೆ. ಚಾಸಾ-19/ಶಿವಕುಮಾರ ನನ್ನ ಸಂಬಂಧಿಕ ಮತ್ತು ಅವರು ತುಂಬ ಗ್ರಾಮದ ವಾಸಿ.

4. ಅಕ್ಟೋಬರ್, 2021 ರಲ್ಲಿ ಶಾಂತಪ್ಪ ಕಾಣೆಯಾಗಿರುತ್ತಾನೆ ಎಂದು ತಿಳಿದುಬಂದಿತು. ನಂತರ ಆರೋಪಿತರೆಲ್ಲರೂ ಶಾಂತಪ್ಪನನ್ನು ಕೊಲೆ ಮಾಡಿರುತ್ತಾರೆ ಮತ್ತು ನನ್ನ ಹೆಸರಿನಲ್ಲಿದ್ದ ವಾಹನದಲ್ಲಿ ಆತನ ಮೃತದೇಹ ಸಾಗಿಸಿರುತ್ತಾರೆ ಎಂದು ತಿಳಿದು ಬಂದಿತು. ನಂತರ ಪೊಲೀಸರು ನನ್ನ ವಾಹನದ ವಿಚಾರವಾಗಿ ಠಾಣೆಗೆ ಕರೆಯಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ ಪರ**

1 ನೇ ಆರೋಪಿ ಸುಮಾರು 15 ವರ್ಷಗಳಿಂದ ಗೋವಾದಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾನು ಮತ್ತು 1 ನೇ ಆರೋಪಿ ಬೇರೆ ಬೇರೆ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ಶಾಂತಪ್ಪ ಮತ್ತು 2 ನೇ ಆರೋಪಿ ಗೋವಾ ರಾಜ್ಯಕ್ಕೆ ದುಡಿಯಲು ಹೆ ೋಗಿ ಅನ್ಯೋನ್ಯವಾಗಿದ್ದರು ಎಂದರೆ ಸರಿ. ಶಾಂತಪ್ಪ ತನ್ನ ಜಮೀನುಗಳನ್ನು ಉಳುಮೆ ಮಾಡಬೇಕು ಎಂದು ಕೇಸರಬಾವಿ ಗ್ರಾಮಕ್ಕೆ ವಾಪಸ್ಸು ಬಂದಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರಿಗೆ ಬುದ್ಧಿವಾದ ಹೇಳಲು ನಾನು, ಚಾಸಾ-19/ಶಿವಾನಂದ ಮಾದರ, ಚಾಸಾ-24 ರವರು ಹೋಗಿದ್ದೆವು. ಯಾವ ದಿನಾಂಕ ಮತ್ತು ವರ್ಷ 1 ಮತ್ತು

2 ನೇ ಆರೋಪಿತರಿಗೆ ಬುದ್ಧಿವಾದ ಹೇಳಿರುತ್ತೇವೆ ಎಂದು ಗೊತ್ತಿಲ್ಲ. ಬುದ್ಧಿವಾದವನ್ನು 1 ಮತ್ತು 2 ನೇ ಆರೋಪಿತರಿಗೆ ಪೋನಿನ ಮುಖಾಂತರ ಹೇಳಿರುತ್ತೇವೆ. ಶಾಂತಪ್ಪ ಕಾಣೆಯಾದ ವಿಚಾರ ತಿಳಿದು ನಾನು ಕೇಸರಬಾವಿ ಗ್ರಾಮಕ್ಕೆ ಬಂದಿರುವುದಿಲ್ಲ. ಶಾಂತಪ್ಪ ಮೃತಪಟ್ಟಿರುತ್ತಾನೆಂದು ವಿಚಾರ ತಿಳಿದ ನಂತರ ನಾನು ಕೇಸರಬಾವಿ ಗ್ರಾಮಕ್ಕೆ ಬಂದಿರುತ್ತೇನೆ. ಆದರೆ ದಿನಾಂಕ ನೆನಪಿರವುದಿಲ್ಲ. ಚಾಸಾ-11 ನಮ್ಮ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ಚಾಸಾ-11 ರವರನ್ನು ನಾವೇ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿ. ಚಾಸಾ-17/ನನ್ನ ತಾಯಿ ಸಹ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ.

2. ಶಾಂತಪ್ಪ ರವರ ಕೊಲೆಯಾಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಹೆಸರಿನಲ್ಲಿದ್ದ ಕಾರಿನಲ್ಲಿ ಶಾಂತಪ್ಪ ರವರ ಮೃತದೇಹ ಸಾಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ನೇ ಆರೋಪಿಗೂ ಶಾಂತಪ್ಪ ರವರ ಜಮೀನಿನ ವಿಚಾರವಾಗಿ ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಆಸ್ತಿ ವಿಚಾರವಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

3. ಹುನಗುಂದ ಪೊಲೀಸರು ನನ್ನನ್ನು ಯಾವ ದಿನಾಂಕ ವಿಚಾರ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ನೆನಪಿಲ್ಲ. ಚಾಸಾ-1 ಮತ್ತು ಚಾಸಾ-17 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ಅಕ್ಷತಾ ಮಾದರ | ಫ್ರಾ.ಸಾ-6 |
| ತಂದೆಯ ಹೆಸರು | : | ಶಾಂತಪ್ಪ | ಚಾಸಾ-11 |
| ವಯಸ್ಸು | : | 15 ವರ್ಷ | |
| ಉದ್ಯೋಗ | : | ಮನೆಗೆಲಸ | |
| ವಿಳಾಸ | : | ಗೋವಾ | |

ದಿಃ 21.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನನ್ನ ಸ್ವಂತ ಊರು ಕೇಸರಬಾವಿ ಗ್ರಾವ಼ು. ಮೃತ ಶಾಂತಪ್ಪ ನನ್ನ ತಂದೆ. 2 ನೇ ಆರೋಪಿ ನನ್ನ ತಾಯಿ. ಚಾಸಾ-10/ಆಕಾಶ ನನ್ನ ಅಣ್ಣ. ನಾನು ಮತ್ತು ನನ್ನ ಅಣ್ಣ ಹಾಗೂ ನನ್ನ ತಂದೆ-ತಾಯಿ ಎಲ್ಲರೂ ಮೊದಲು ಗೋವಾದಲ್ಲಿ ವಾಸವಾಗಿದ್ದೆವು. ನನ್ನ ತಂದೆ ಗೋವಾದಲ್ಲಿ ಗೌಂಡಿ ಕೆಲಸ ಮಾಡುತ್ತಿದ್ದರು. 1 ನೇ ಆರೋಪಿ/ಬಸವರಾಜ ಮಾದರ ನನ್ನ ಮಾವ. ಆತನು ಸಹ ಗೋವಾದಲ್ಲಿ ವಾಸವಾಗಿದ್ದನು. ಆ ಸಮಯದಲ್ಲಿ 2 ನೇ ಆರೋಪಿಯಾದ ನನ್ನ ತಾಯಿ/ಹುಲಗವ್ವ ಮತ್ತು 1 ನೇ ಆರೋಪಿ ಬಸವರಾಜ ರವರ ಮಧ್ಯ ಅನೈತಿಕ ಸಂಬಂಧ ಬೆಳೆದಿತ್ತು. ಈ ವಿಚಾರ ನನ್ನ ತಂದೆಗೆ ತಿಳಿದು ಅವರು 1 ಮತ್ತು 2 ನೇ ಆರೋಪಿಗೆ ಬೈದಿರುತ್ತಾರೆ. ಆದರೂ ಸಹ ಅವರು ಅನೈತಿಕ ಸಂಬಂಧವನ್ನು ಬಿಡಲಿಲ್ಲ. ಈ ಕಾರಣದಿಂದ ನನ್ನ ತಂದೆ ಶಾಂತಪ್ಪ ನನ್ನನ್ನು ಹಾಗೂ ನನ್ನ ತಾಯಿಯನ್ನು ನಮ್ಮ ಸ್ವಂತ ಊರಾದ ಕೇಸರಬಾವಿ ಗೆ ವಾಪಸ್ಸು ಕರೆದುಕೊಂಡು ಬಂದಿರುತ್ತಾರೆ. ನಂತರ ನನ್ನ ತಂದೆ ಕೇಸರಬಾವಿಯಲ್ಲಿ ಇರುವ ಅವರ ಸ್ವಂತ ಜಾಗದಲ್ಲಿ ಒಂದು ಶೆಡ್ ಹಾಕಿಕೊಂಡು ವಾಸವಾಗಿದ್ದರು. ನನ್ನ ಅಣ್ಣ ಚಾಸಾ-10/ಆಕಾಶ ವಿದ್ಯಾಭ್ಯಾಸಕ್ಕಾಗಿ ನನ್ನ ಅಜ್ಜಿ/ಚಾಸಾ-17 ರವರ ಜೊತೆಯಲ್ಲಿ ಗೋವಾದಲ್ಲಿಯೇ ವಾಸವಾಗಿದ್ದನು.

2. ನಾವು ಗೋವಾದಿಂದ ನಮ್ಮ ಊರಿಗೆ ಬಂದ ನಂತರ 1 ನೇ ಆರೋಪಿ ಸಹ ನಮ್ಮ ಊರಿಗೆ ಬಂದಿರುತ್ತಾನೆ. ನಂತರ ನನ್ನ ತಾಯಿ 2 ನೇ ಆರೋಪಿ ಮತ್ತು 1 ನೇ ಆರೋಪಿ ರವರ ಅನೈತಿಕ ಸಂಬಂಧವನ್ನು ಮುಂದುವರೆಸಿರುತ್ತಾರೆ.

3. ದಿಃ 22.10.2021 ರಂದು ನನ್ನ ತಂದೆ ಮೃತ ಶಾಂತಪ್ಪ ಕೆಲಸ ಮುಗಿಸಿಕೊಂಡು ಬಂದು ಮನೆಯಲ್ಲಿ ಊಟ ಮಾಡಿ ಶೆಡ್ ನಲ್ಲಿ ಮಲಗಿಕೊಂಡಿರುತ್ತಾರೆ. ನಾನು ಆ ಸಮಯದಲ್ಲಿ ಒಲೆಯ ಮುಂದೆ ಕುಳಿತುಕೊಂಡಿದ್ದೆ. ನಂತರ ನನ್ನ ತಾಯಿ/2 ನೇ ಆರೋಪಿ ಇವಳು 1 ನೇ ಆರೋಪಿಗೆ ಕರೆ ಮಾಡಿರುತ್ತಾರೆ. ರಾತ್ರಿ ಸುಮಾರು 12-30 ಗಂಟೆಗೆ 4 ಜನ ನಮ್ಮ ಶೆಡ್ ನ ಬಳಿ ಬಂದಿರುತ್ತಾರೆ. ಅವರುಗಳೆಂದರೆ 1 ನೇ ಆರೋಪಿ/ಬಸವರಾಜ, 3 ನೇ ಆರೋಪಿ/ನಿಂಗಪ್ಪ ಹಾಗೂ ಇಬ್ಬರು ತುಂಬ ಗ್ರಾಮದ ಹುಡುಗರು. ನಂತರ 3 ನೇ ಆರೋಪಿ/ನಿಂಗಪ್ಪ ನನ್ನ ತಂದೆಯ ಎದೆಯ ಮೇಲೆ ಕುಳಿತು ಕತ್ತನ್ನು ಹಿಸುಕಿರುತ್ತಾನೆ. 1 ನೇ ಆರೋಪಿ/ಬಸವರಾಜ ಕೊಡಲಿಯಿಂದ ನನ್ನ ತಂದೆಯ ತಲೆಗೆ ಹೊಡೆದಿರುತ್ತಾನೆ. ತುಂಬ ಗ್ರಾಮದ ಹುಡುಗರು ನನ್ನ ತಂದೆಯ ಕೈ-ಕಾಲುಗಳನ್ನು ಹಿಡಿದುಕೊಂಡಿದ್ದರು. ನಂತರ 3 ನೇ ಆರೋಪಿ/ನಿಂಗಪ್ಪ ನನ್ನ ತಂದೆಯ ಮೃತದೇಹವನ್ನು ಹಾಸಿಗೆಯಿಂದ ಸುತ್ತಿ ಹೊತ್ತುಕೊಂಡು ಹೋದನು. ಆ ಸಮಯದಲ್ಲಿ ನಾನು ಒಲೆಯ ಮುಂದೆ ಕುಳಿತು ಅಳುತ್ತಿದ್ದೆನು. ನಂತರ ನನ್ನ ತಾಯಿ 2 ನೇ ಆರೋಪಿ ನನಗೆ ಈ ವಿಚಾರವನ್ನು ಯಾರಿಗೂ ಹೇಳಬಾರದು, ಹೇಳಿದರೆ ನಿನ್ನನ್ನು ಸಹ ನಿನ್ನ ತಂದೆಯ ಬಳಿ ಕಳುಹಿಸುತ್ತೇನೆ ಎಂದು ಹೆದರಿಕೆ ಹಾಕಿದಳು.

4. ಇದಾದ 20 ದಿನಗಳ ನಂತರ ಪೊಲೀಸರು ಆರೋಪಿತರಾದ ಬಸವರಾಜ, ನಿಂಗಪ್ಪ, ಹುಲಗವ್ವ ಹಾಗೂ ತುಂಬ ಗ್ರಾಮದ ಇಬ್ಬರನ್ನು ಹಿಡಿದಿರುತ್ತಾರೆ. ಆ ಸಮಯದಲ್ಲಿ ನಾನು ಘಟನೆ ವಿಚಾರವನ್ನು ನನ್ನ ಚಿಕ್ಕಪ್ಪ/ಚಾಸಾ-1 ಹಾಗೂ ನನ್ನ ಅಜ್ಜಿ/ಚಾಸಾ-17 ರವರಿಗೆ ತಿಳಿಸಿರುತ್ತೇನೆ. ನಂತರ ಪೊಲೀಸರು ನನ್ನನ್ನು ಪೊಲೀಸ ಠಾಣೆಗೆ ಕರೆಯಿಸಿ, ನನ್ನನ್ನು

ವಿಚಾರ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಆರೋಪಿತರೆಲ್ಲರೂ ಠಾಣೆಯಲ್ಲಿ ಇದ್ದರು. ಆರೋಪಿತರನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ.

5. ಇದಾದ ಸುಮಾರು 20 ದಿನಗಳ ನಂತರ ಪೊಲೀಸರು ನನ್ನನ್ನು ಹುನಗುಂದ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ನ್ಯಾಯಾಧೀಶರ ಮುಂದೆ ನಡೆದ ಘಟನೆಯ ವಿಚಾರವಾಗಿ ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲಂ 164 ಸಿ ಆರ್ ಪಿ ಸಿ ಹೇಳಿಕೆ ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಶಾನೆ ಪಿ-28 ಎಂದು, ಸಾಕ್ಷಿ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

6. ಇದಾದ ಸ್ವಲ್ಪ ದಿನಗಳ ನಂತರ ಪೊಲೀಸರು ನನ್ನನ್ನು ಮತ್ತು ನನ್ನ ಚಿಕ್ಕಪ್ಪ/ಚಾಸಾ-1 ರವರನ್ನು ಹುನಗುಂದ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು, ಸದರಿ ದಿನ ನ್ಯಾಯಾಧೀಶರ ಮುಂದೆ ವೈದ್ಯರು ನನ್ನ ಮತ್ತು ನನ್ನ ಚಿಕ್ಕಪ್ಪ ಚಾಸಾ-1 ರವರ ಮಾದರಿ ರಕ್ತವನ್ನು ಪಡೆದುಕೊಂಡಿರುತ್ತಾರೆ. ನಮ್ಮ ಮನೆಗೆ ಬಂದಿದ್ದ ತುಂಬ ಗ್ರಾಮದ ಇಬ್ಬರು ಹುಡುಗರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಮತ್ತು 5 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರಾದ ನನ್ನ ತಾಯಿ, ಬಸವರಾಜ ಮತ್ತು ನಿಂಗಪ್ಪ ರವರನ್ನು ಈ ದಿನ ವೀಡಿಯೋ ಕಾನ್ಫರೆನ್ಸ ಮೂಲಕ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿತ**ರ **ಪರ**

ನಾನು 10 ನೇ ತರಗತಿಯವರೆಗೆ ಗೋವಾದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ಊರಿನ ಸಾಕಷ್ಟು ಜನರು ಗೋವಾದಲ್ಲಿ ದುಡಿಯಲು ಹೋಗುತ್ತಾರೆ ಎಂದರೆ ಸರಿ. ನನ್ನ

ದೊಡ್ಡಪ್ಪರಾದ ಸಂಗನಬಸಪ್ಪ ಮತ್ತು ಮುದಕಪ್ಪ ರವರು ಮೃತಪಟ್ಟಿದ್ದು ಅವರಿಗೆ ಮಕ್ಕಳಿರುತ್ತಾರೆ ಎಂದರೆ ಸರಿ. ನಾವು ಗೋವಾದಲ್ಲಿ ವಾಸವಾಗಿದ್ದಾಗ ನನ್ನ ತಂದೆ ಮತ್ತು ನನ್ನ ತಾಯಿ ಚೆನ್ನಾಗಿ ಸಂಸಾರ ಮಾಡಿಕೊಂಡು ಇದ್ದರು. ನನ್ನ ಮತ್ತು ನನ್ನ ಅಣ್ಣನ ವಿದ್ಯಾಭ್ಯಾಸದ ಖರ್ಚುಗಳನ್ನು ನನ್ನ ತಂದೆ-ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾವು ಗೋವಾದಲ್ಲಿ ವಾಸವಾಗಿದ್ದಾಗ ನಮ್ಮ ಊರಾದ ಕೇಸರಬಾವಿಯಲ್ಲಿನ ಜಮೀನನ್ನು ಉಳುಮೆ ಮಾಡುತ್ತಿರಲಿಲ್ಲ.

2. ಚಾಸಾ-1 ಇಲಕಲ್ಲನಲ್ಲಿ ಕೆಲಸ ಮಾಡುತ್ತಿದ್ದರಿಂದ ಜಮೀನುಗಳನ್ನು ಉಳುಮೆ ಮಾಡುವ ವಿಚಾರವಾಗಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವಿಚಾರ ಮಾಡುತ್ತಿದ್ದರು ಎಂದರೆ ಸರಿ. ಈ ಕಾರಣದಿಂದ ನಾವು ಊರಿಗೆ ಬಂದಿರುತ್ತೇವೆ ಎಂದರೆ ಸರಿ. ಊರಿಗೆ ಬಂದ ನಂತರ ನನ್ನ ತಂದೆ ವ್ಯವಸಾಯ ಮತ್ತು ಬೇರೆ ಕೆಲಸಗಳನ್ನು ಮಾಡಿಕೊಂಡು ಇದ್ದರು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಂದೆಗೆ ಸರಾಯಿ ಕುಡಿಯುವ ಅಭ್ಯಾಸವಿತ್ತು ಎಂದರೆ ಸರಿಯಲ್ಲ.

3. ನಾವು ಕಟ್ಟಿಕೊಂಡಿದ್ದ ಶೆಡ್ ನ ಅಕ್ಕಪಕ್ಕದಲ್ಲಿ ಮನೆ ಇರುತ್ತವೆ ಎಂದರೆ ಸಾಕ್ಷಿ ಬಲಭಾಗಕ್ಕೆ 1 ನೇ ಆರೋಪಿ/ಬಸರಾಜನ ಮನೆ ಬರುತ್ತದೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಮನೆಗೆ ಹೊಂದಿಕೊಂಡಂತೆ ನಮ್ಮ ಶೆಡ್ ಇರುತ್ತದೆ ಎಂದರೆ ಸರಿ. 1 ನೇ ಆರೋಪಿ ಜೊತೆಯಲ್ಲಿ ಆತನ ತಂದೆ-ತಾಯಿ ಮತ್ತು ಅಣ್ಣ ತಮ್ಮಂದಿರು ಜೊತೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನಮ್ಮ ಮನೆಗೆ ಯಾರಾದರೂ ಬಂದು ಹೋದರೆ 1 ನೇ ಆರೋಪಿಗೆ ಸೇರಿದ ಮನೆಯಲ್ಲಿ ಗೊತ್ತಾಗುತ್ತದೆ ಎಂದರೆ ಸರಿ. ನಮ್ಮ ಮನೆಯಲ್ಲಿ ಯಾವುದೇ ಗಲಾಟೆ ಅಥವಾ ಕೂಗಾಟವಾದರೆ 1 ನೇ ಆರೋಪಿ ರವರ ಮನೆಗೆ ಕೇಳಿ

ಬರುತ್ತದೆ ಎಂದರೆ ಸರಿ. ನನ್ನ ತಾಯಿ ಆ ಸಮಯದಲ್ಲಿ ಮನೆಯನ್ನು ನಿರ್ವಹಿಸುತ್ತಿದ್ದರು ಮತ್ತು ನನ್ನ ತಂದೆ ದುಡಿದಿದ್ದ ಹಣವನ್ನು ಅವರೆ ಇಟ್ಟುಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಅಜ್ಜಿ/ಚಾಸಾ-17 ರವರಿಗೆ ಯಾವುದಾದರೂ ವಸ್ತು ಅಥವಾ ಹಣಕಾಸು ಬೇಕಾದರೆ 2 ನೇ ಆರೋಪಿ ಕಡೆಯಿಂದ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ.

4. ನಾವು ಗೋವಾದಲ್ಲಿ ವಾಸವಾಗಿದ್ದಾಗ 1 ನೇ ಆರೋಪಿ ನಮ್ಮ ಮನೆಗೆ ಬಂದುಹೋಗುತ್ತಿದ್ದಾಗ ನಾನು ಆತನನ್ನು ಮನೆಗೆ ಬರಬೇಡ ಎಂದು ಹೇಳಿರುತ್ತೇನೆ. ನಾನು ಸದರಿ ಸಮಯದಲ್ಲಿ ಅನೈತಿಕ ಸಂಬಂಧದ ವಿಚಾರವನ್ನು ಯಾರಿಗೂ ತಿಳಿಸಿರುವುದಿಲ್ಲ. ನಾನು ಮತ್ತು ನನ್ನ ತಂದೆ 1 ನೇ ಆರೋಪಿತನಿಗೆ ಬೈದಿರುವ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ದಿಃ 22.10.2021 ರಂದು ಆರೋಪಿತರು ನಮ್ಮ ಮನೆಗೆ ಬಂದಿದ್ದಾರೆ ಎಂದು ಹೇಳುವ ದಿನ ಅವರೆಲ್ಲರು ನಮ್ಮ ಮನೆಗೆ ಏಕೆ ಬಂದಿರುತ್ತಾರೆ ಎಂದು ನಾನು ನನ್ನ ತಾಯಿಯ ಹತ್ತಿರ ವಿಚಾರ ಮಾಡಿರುವುದಿಲ್ಲ. ನಾನು ಊರಿನಲ್ಲಿ ವಾಸವಾಗಿದ್ದಾಗ 1 ನೇ ಆರೋಪಿ ನಮ್ಮ ಮನೆಗೆ ಬಂದಾಗ ನಾನು 1 ನೇ ಆರೋಪಿಗೆ ಯಾವುದೇ ವಿಚಾರವಾಗಿ ಪ್ರಶ್ನಿಸಿರುವುದಿಲ್ಲ. ನಾನು 1 ನೇ ಆರೋಪಿಯ ಕುಟುಂಬದವರಿಗೆ 1 ನೇ ಆರೋಪಿ ನಮ್ಮ ಮನೆಗೆ ಬರುವ ವಿಚಾರವನ್ನು ತಿಳಿಸಿರುವುದಿಲ್ಲ.

5. ಆರೋಪಿತರು ನನ್ನ ತಂದೆಯ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದಾಗ ಮನೆಯ ಗೋಡೆಗಳ ಮೇಲೆ ಮತ್ತು ನೆಲದ ಮೇಲೆ ರಕ್ತದ ಕಲೆಗಳು ಆಗಿರುತ್ತವೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟ 2-3 ದಿನಗಳ ನಂತರ ನನ್ನ ಚಿಕ್ಕಪ್ಪ/ಚಾಸಾ-1 ನಮ್ಮ ಮನೆಗೆ ಬಂದಿರುತ್ತಾರೆ. ನನ್ನ ತಾಯಿ ನನಗೆ ಬೆದರಿಕೆ ಹಾಕಿದ್ದರಿಂದ ನಾನು ಘಟನೆ ವಿಚಾರವನ್ನು ಚಾಸಾ-1 ರವರಿಗೆ ತಿಳಿಸಲಿಲ್ಲ. ನನ್ನ ತಾಯಿ ನನಗೆ ಬೆದರಿಕೆ ಹಾಕಿದ ವಿಚಾರವನ್ನು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ,

6. ನನ್ನ ತಂದೆ ಊರಿನಲ್ಲಿದ್ದಾಗ ಅಂಕಲಿ ಮಠಕ್ಕೆ ಹೋಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ಅಂಕಲಿ ಮಠಕ್ಕೆ ಹೋಗಿ ಅಲ್ಲಿಯೆ ಇದ್ದಾರೆ ಎಂದು ಊರಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿ.

7. ನನ್ನ ತಾಯಿ ದಿಃ 01.11.2021 ರಂದು ನಮ್ಮ ತಂದೆ ಕಾಣೆಯಾದ ಬಗ್ಗೆ ಇಲಕಲ್ಲ ಪೊಲೀಸ ಠಾಣೆಯಲ್ಲಿ ದೂರನ್ನು ದಾಖಲಿಸಿದ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ನನ್ನ ತಂದೆ ಕಾಣೆಯಾದ ನಂತರ ನನ್ನ ತಾಯಿಗೆ ನನ್ನ ದೊಡ್ಡಪ್ಪನ ಮಕ್ಕಳು ಹಾಗೂ ಚಾಸಾ-1 ನಮ್ಮ ಜಮೀನನ್ನು ಅವರಿಗೆ ಬಿಟ್ಟು ಕೊಡುವಂತೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ತಾಯಿ ಅದಕ್ಕೆ ಒಪ್ಪಲಿಲ್ಲ ಎಂದರೆ ಸರಿ. ಈ ಕಾರಣದಿಂದ ನನ್ನ ದೊಡ್ಡಪ್ಪನ ಮಕ್ಕಳು ಮತ್ತು ಚಾಸಾ-1 ನನ್ನ ತಾಯಿ ಮೇಲೆ ಸಿಟ್ಟಾಗಿದ್ದರು ಎಂದರೆ ಸರಿ. ನನ್ನ ಅಜ್ಜಿ ಚಾಸಾ-17 ರವರು ಆಸ್ತಿಯನ್ನು ನನ್ನ ದೊಡ್ಡಪ್ಪನ ಮಕ್ಕಳು ಮತ್ತು ಚಾಸಾ-1 ರವರಿಗೆ ಬಿಟ್ಟು ಬಿಡುವಂತೆ ನನ್ನ ತಾಯಿ 1 ನೇ ಆರೋಪಿಗೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿ. ಅದಕ್ಕೆ ನನ್ನ ತಾಯಿ ಒಪ್ಪಿರಲಿಲ್ಲ ಎಂದರೆ ಸರಿ. ಈ ಕಾರಣದಿಂದ ಚಾಸಾ-17 ರವರು ಸಹ ನನ್ನ ತಾಯಿ ಮೇಲೆ ಸಿಟ್ಟಾಗಿದ್ದರು ಎಂದರೆ ಸರಿ.

8. ದಿಃ 01.11.2021 ರಂದು ನಮ್ಮ ತಂದೆ ಕಾಣೆಯಾದ ಬಗ್ಗೆ ದೂರು ದಾಖಲಿಸಲು ನಾನು, ನನ್ನ ತಾಯಿ/1 ನೇ ಆರೋಪಿ, ಚಾಸಾ-17, ಚಾಸಾ-1 ರವರು ಹೋಗಿದ್ದೆವು. ಆ ಸಮಯದಲ್ಲಿ ನನ್ನ ತಂದೆ ಕಾಣೆಯಾಗಿರುತ್ತಾರೆ ಎಂದು ನಾವು ತಿಳಿಸಿರುತ್ತೇವೆ ಎಂದರೆ ಸರಿ. ಸದರಿ ದಿನ ಪೊಲೀಸರಿಗೆ ನಾನು ಯಾವುದೇ ಘಟನೆ ವಿಚಾರ ತಿಳಿಸಿರುವುದಿಲ್ಲ ಎಂದರೆ ಸರಿ.

9. ಚಾಸಾ-1 ರವರು ದೂರನ್ನು ಗುಮಾನಿ ಮೇಲೆ ದಾಖಲಿಸುವ ಮುನ್ನ ಸಂಶಯದ ಆಧಾರದ ಮೇಲೆ 2 ದಿನಗಳ ಮುಂಚೆ ಆರೋಪಿತರನ್ನು ಪೊಲೀಸರು ವಶಕ್ಕೆ

ಪಡೆದುಕೊಂಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಚಾಸಾ-1 ರವರ ಜೊತೆ ವಾಸವಾಗಿದ್ದೆ ಎಂದರೆ ಸರಿ. ಪೊಲೀಸರು ನನ್ನ ಹೇಳಿಕೆಯನ್ನು ಯಾವ ದಿನಾಂಕ ಪಡೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-17 ರವರು ಸಹ ಠಾಣೆಯಲ್ಲಿ ಇದ್ದರು ಎಂದರೆ ಸರಿ.

10. ದಿಃ 22.10.2021 ರಂದು ನನ್ನ ತಾಯಿ 1 ನೇ ಆರೋಪಿಗೆ ಕರೆ ಮಾಡಿರುವುದಿಲ್ಲ ಮತ್ತು ಸದರಿ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಮನೆಗೆ ಬಂದು ನನ್ನ ತಂದೆಯ ಮೇಲೆ ಹಲ್ಲೆ ಮಾಡಿ ಆತನ ಮೃತದೇಹವನ್ನು 3 ನೇ ಆರೋಪಿ/ನಿಂಗಪ್ಪ ಎತ್ತಿಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನಗೆ ಯಾವುದೇ ರೀತಿ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ನನ್ನ ತಾಯಿ ಮಧ್ಯ ಯಾವುದೇ ಅನೈತಿಕ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 17 ರವರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಆಸ್ತಿಯನ್ನು ಚಾಸಾ-1 ಮತ್ತು ನನ್ನ ದೊಡ್ಡಪ್ಪನ ಮಕ್ಕಳು ಲಪಟಾಯಿಸಲು ನನ್ನ ತಾಯಿ ಮತ್ತು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಈಗ ನಾನು ಚಾಸಾ-1 ಮತ್ತು ಚಾಸಾ-17 ರವರ ಜೊತೆ ವಾಸವಾಗಿರುತ್ತೇನೆ ಎಂದರೆ ಸರಿ. ಚಾಸಾ-1 ರವರು ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆ ಪಡೆದುಕೊಂಡಿದ್ದ ದಿನ ಚಾಸಾ-1 ರವರು ಸಹ ಹುನಗುಂದ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. ಚಾಸಾ-1 ರವರು ಹೇಳಿಕೊಟ್ಟಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ 4 ಮತ್ತು 5 ನೇ ಆರೋಪಿತರು ಹೆಸರು ನನಗೆ ಗೊತ್ತಿಲ್ಲ

ಎಂದರೆ ಸರಿ. 4 ಮತ್ತು 5 ನೇ ಆರೋಪಿತರನ್ನು ನಾನು ಈ ಮೊದಲು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂರದೆ ಸರಿಯಲ್ಲ. ನನ್ನ ತಂದೆಯ ಕೊಲೆ ಆಗಿರುವುದಿಲ್ಲ ಅವರು ಕಾಣೆಯಾಗಿರುತ್ತಾರೆ ಎಂದರೆ ಸರಿಯಲ್ಲ. .

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.